# ದಿವಶೀಗೌರೀ ಹಾಡು

## (ಭೀಮನ ಅಮಾವಾಸ್ಯ ಹಾಡು)

### ಪ್ರಾರಂಭಃ

ಧಾಟಿ - "ಅಚ್ಚದಲಿ ಸಾರಿಸಿ ಹವಳದಲಿ ಗುಡಿಗಟ್ಟಿ" ಎಂಬ ಮಹಾಲಕ್ಷ್ಮೀ ಆಶೀರ್ವಾದದ ಪದದಂತೆ

ಶಕ್ತಿಗಣೇಶನ ಭಕ್ತಿಯಲಿ ಬಲಗೊಂಡು । ಭಕ್ತಿಪೂರ್ವಕವಾಗಿ ಕಥೆಯ ಕೇಳಿ॥ ಮುತ್ತೈದೆತನಗಳ ಶರಗೊಡ್ಡಿ ಬೇಡುವೆ। ಆರ್ಥಿಯಿಂದಲಿ ನೋವೆ ತೊಡಗಿದರು ॥ ಜೋತಿಗೆ ಸಕಲ ಸನ್ಮತಿಗೆ ॥ 1 ॥

ಕಟ್ಲೆರಾಯನ ಹೊಟ್ಟೆಯಲಿ ಪುತ್ರ ಹುಟ್ಟಿದನೆಂದು। ವಿಪ್ರ ಸುರರೆಲ್ಲಾ ನೆರೆದರಾಗ॥ ಆರ್ಥಿಯಿಂದಲಿ ಹೋಗಿ ಜಾತಕವನು ಬರಿಸಿ॥ ಇಟ್ಟರು ಕಾಳಿಂಗನೆಂಬ ಹೆಸರು ॥ ಜ್ಯೋತಿ...... ॥ 2 ॥

ಕಟ್ಲೆರಾಯನ ಮಗ ಕಾಳಿಂಗರಾಯನು। ಆರ್ಥಿಯಿಂದ ಬೇಟೆಗೆ ಹೋದನು॥ ಚಿತ್ರದ ಹುಲಿ ಕಂಡು ಮೂರ್ಛೆಗೈದನು। ಮಾತಾಪಿತೃಗಳು ನೆರೆದರಾಗ॥ ಜ್ಯೋ...... ॥ 3 ॥

ಪಟ್ಟವಾಳಿಯ ಸೆರಗಿಲೆ ಹತ್ತು ಸಾವಿರ ಹೊನ್ನ। ಕಟ್ಟಿದರು ಆ ಕ್ಷಣದೊಳಗೆ॥ ಸತ್ತ ಶವಕೆ ಹೆಣ್ಣು ಕೊಟ್ಟರೀ ಎನುತಲೆ। ಪಟ್ಟಣದೊಳಗೆಲ್ಲಾ ಸಾರಿದರು॥ ಜ್ಯೋ ..... ॥ 4 ॥

ಅಣ್ಣ ಅತ್ತಿಗೆ ಬಳಿಯಲಿ ಕನ್ನಿಕೆಯನು ಬಿಟ್ಟು। ಪುಣ್ಯ ಪುರುಷರು ಕಾಶಿಗೆ ಹೋದರು॥ ಮಾನ್ಯರ ಮಗ ತಾ ಮೂರ್ಛೆಗೈದನು। ಕನ್ನಿಕೆಯನು ಕೊಡು ಎಂದು ಕೇಳಿದರು॥ ಜ್ಯೋ...... ॥ 5 ॥

ಅಣ್ಣ ಅತ್ತಿಗೆ ಕೂಡಿ ಆಲೋಚನೆಯ ಮಾಡಿ। ಕನ್ನಿಕೆ ಧಾರೆಯನೆರೆಯೋಣೇಗ॥ ಬಣ್ಣ ಬಂಗಾರವು ಹೊನ್ನಿನ ಜಾಳಿಗೆ। ಕನ್ನೆಗೆ ಸಹಿತ ನಮಗೀವುದು॥ ಜೋ......
॥6॥

ಆಗ ತಾಳಿಯ ತಂದು ಬೇಗ ಕಂಕಣ ಕಟ್ಟಿ । ಶೀಘ್ರದಿಂದಲಿ ಧಾರೆಯೆರೆದರು॥ ವೇಳೆ ಮೀರಿತೆಂದು ಹೊತ್ತಾಗ ವೈದ್ಯರು। ಭಾಗೀರಥಿಯ ದಡದ ಮೇಲೆ॥ ಜೋ....
॥7॥

ಕಾರೆಂಬ ಕತ್ತಲೆ ಘೋರೆಂದು ಮಳೆ ಬಂದು। ಅರಣ್ಯದಲ್ಲಿ ಒಯ್ದು ನಿಲ್ಲಿಸಿದರು॥ ನಾರಿಯೇ ನಿನಗಂಡನ ಕಾಯ್ದುಕೋ ಎಂದು । ಬೇಗನೇ ನಾರಿಯರು ತಿರುಗಿದರು ॥ ಜೋ....
॥8॥

ಅಂದಮಾತನು ಕೇಳಿ, ನೊಂದು ತನ್ನ ಮನದೊಳು। ಇಂದಿರಾಪತಿಯೇ ಗತಿಯೆನ್ನುತ॥ ತಂದೆತಾಯಿಗಳನ್ನು ಮನದೊಳು ನೆನೆಯುತ। ರಂಭೆ ಅತಿ ದುಃಖ ಪಡುತ್ತಿದ್ದಳು॥ ಜೋ......
॥9॥

ಒಂದು ಗಲ್ಲದಲಿ ಹಾಲು ಒಂದು ಗಲ್ಲದಲಿ ಬೆಣ್ಣೆ। ಕಂದಮ್ಮ ನಿನಗೇಕೆ ಕಡು ದುಃಖವು॥ ರಂಭೆ ನಮ್ಮ ಮಂದಿರಕೆ ಬಾಬಾ ಎನುತಲಿ। ಚಂದದಿ ಮಾವಯ್ಯ ಕರೆದನಾಗ॥ ಜೋ......
॥10॥

ರೊಕ್ಕಕಾಶೆಮಾಡಿ ಕೊಟ್ಟರು ನಮ್ಮವರು। ಮತ್ತೆ ಆ ಊರಿಗೆ ಹೋಗೆನೆಂದಳು॥ ಅಟ್ಟುಂಬ ಅಡವಿಯಲಿ ಚಿತ್ತದೊಲ್ಲಭನ। ಹತ್ತಿಲೇ ಇದ್ದು ನಾಕಾಯ್ದುಕೊಂಬೆ॥ ಜೋ......
॥11॥

ಅಂದಮಾತನು ಕೇಳಿ ಅತಿ ಕ್ಲೇಶ ಪಡುತಲಿ। ಬಂದ ಭೂಪನು ತನ್ನ ಅರಮನೆಗೆ॥ ಅಂದುದಯವಾಗಲು ರಂಭೆಯರ ಮಕ್ಕಳು। ಚಂದದಿ ಪುಷ್ಪಗಳ ತರ ನಡೆದರು॥ ಜೋ......
॥12॥

ರಾಯನ ಮಡದಿ ಭೂದೇವನ ಕಿರಿತಂಗಿ। ನೀರದಡದಲ್ಲಿ ಕುಳಿತಿದ್ದಳು॥ ಬಾಹೋ ಬಾಲೆಯರೊಳಗಿನ ಸುದ್ದಿ। ಏನು ಇದೆಂದು ಕೇಳಿದಳು ॥ ಜ್ಯೋ.... ॥ 13 ॥

ಆಷಾಡಮಾಸದಲ್ಲಿ ಈ ವ್ರತವ ಮಾಡಲು। ಶ್ರೀಶನೊಲುಮೆಯು ನಮಗಾಗುವದು ॥ ಪೋಷಿಸಿ ಪತಿಯ ಚಿರಾಯು ಮಾಡುವೆನೆಂದು। ತೋಷದಿ ಬಾಲೆಯರು ಹೇಳಿದರು ॥ ಜ್ಯೋ...... ॥ 14 ॥

ಊರೊಳಗೆಲ್ಲ ತಾಣಾ ದೀವಿಗೆ ನೋವಿ। ನೂಲಬೇಕೆಂಬ ಸಂಭ್ರಮದಿ॥ ಗೋಗಳ ಕಾಯ್ಕೊಂಡು ಹೂಗಳ ಕೊಯ್ಕೊಂಡು। ಭೋರೆಂದು ನಾರಿಯರು ತೆರಳಿದರು॥ ಜ್ಯೋ....... ॥ 15 ॥

ಅಂದಮಾತನು ಕೇಳಿ ಅತಿ ಹರುಷವ ತಾಳಿ। ಬಂದಳು ಭಾಗೀರಥಿ ನದಿಯೊಳಗೆ॥ ಮಿಂದು ಮಡಿಯನುಟ್ಟು ಸಂದೇಹವಿಲ್ಲದೆ। ಚಂದದಿ ನಡೆದಳು ಶವಬಿದ್ದ ಸ್ಥಳಕೆ॥ ಜ್ಯೋ ..... ॥ 16 ॥

ಸಿದಿಗೆಯನು ಮುರಿದು ತಾಣಾ ದೀವಿಗೆಯನು ಮಾಡಿ। ಶೀಘ್ರದಿ ಮಳಲ ಮುಟ್ಟಿಗೆಯನು ಮಾಡಿ॥ ನಾರು ಬತ್ತಿಯ ಮಾಡಿ ನೀರು ಎಣ್ಣೆಯಮಾಡಿ॥ ತಾನಲ್ಲಿ ಗೌರಿಯ ನೂತಳಾಗ ॥ ಜ್ಯೋ..... ॥ 17 ॥

ಊರೊಳಗೆಲ್ಲ ತಾಣಾದೀವಿಗೆ ನೋಡಿ। ಅಣ್ಣಯ್ಯ ಭಂಡಾರವನೊಡೆದು ಕೊಟ್ಟ॥ ನನ್ನ ಭಂಡಾರನೊಡೆಯುವರಾರೆಂದು । ತುಂಬು ನಾರಿಯರೆಳೆಗಣ್ಣು॥ ಜ್ಯೋ....... ॥ 18 ॥

ನಂದಿಯನೇರಿಕೊಂಡು ಕೆಂಜೆಡೆ ಧರಿಸಿದ। ಚಂದ್ರಶೇಖರ ಪಾರ್ವತಿ ಬಂದರು॥ ತಂಗಿಯಿದೇನೆಂದು ಚಂದದಿ ಹೇಳೆನಲು। ಇಂದಿನ ವ್ರತವಿದೆಂದು ಅರಿಹಿದಳು॥ ಜ್ಯೋ...... ॥ 19 ॥

ಪಾರ್ವತಿಯು ವ್ರತವನು ಹೇಳಿದಳು। ಮಹಾದೇವ ಭಂಡಾರ ಒಡೆದು ಕೊಟ್ಟ॥
ತಂದು ಕಮಂಡಲುದಕ ಸಿಡಿಸಲು। ಭೂಮಂಡಲಪತಿ ಮೈಮುರಿದೆದ್ದನು॥
ಜೋ..... ॥ 20 ॥

ಕಣ್ಣು ತೆಗೆದು ನೋಡಿ ಕನ್ಯೆ ನೀದಾರು। ಹೆಣ್ಣೇ ನೀ ದಾರ ಮಗಳೆಂದರು॥
ಹೊನ್ನಿಗಾಶೆ ಮಾಡಿಕೊಟ್ಟವರು ನಮ್ಮವರು। ನಿಮ್ಮವರು ಧಾರೆಯನು ಎರೆದರು
॥ ಜೋ...... ॥ 21 ॥

ನಾರಿ ಪುರುಷರು ಆನಂದದಿಂದಿರುತಿರಲು। ಗೋವು ಕಾಯುವ ಮಕ್ಕಳು
ಕಂಡರು॥ ಬೇಗನೆ ಬಂದು ರಾಯ ನಿನ್ನಯ ಮಗ ಸೊಸೆ। ನೀರ ದಡದಲೆ
ಆನಂದದಿಂದಿರುತಿಹರು ॥ ಜೋ...... ॥ 23 ॥

ಅಂದಮಾತ ಕೇಳುತ ಭೂಪತಿಯ ತಾನು। ಪ್ರೇಮಾಶ್ರುಗಳ ಚೆಲ್ಲಿ ಓಗೆಂದನು॥
ಸ್ವಾಮಿ ಶ್ರೀಹರಿಯ ದಯ ನನಗಾಯಿತೆನುತಲಿ। ಮತ್ತೆ ಬ್ರಾಹ್ಮಣರ ಸಹಿತ ತಾ
ಬಂದನು॥ ಜೋ..... ॥ 24 ॥

ಪುತ್ರ ಸೊಸೆಯು ನೋಡಿ ಅತ್ಯಂತ ಹರುಷದಿ। ಚಿತ್ರದೊಳಗೆ ನಲಿಯುತಿದ್ದನು॥
ಮತ್ತೆ ನಮ್ಮ ಹಿರಿಯರ ದಯವು ಇದೆನುತಲಿ। ಲಕ್ಷ ಗೋದಾನಗಳನ್ನು
ಕೊಟ್ಟನು॥ ಜೋ...... ॥ 25 ॥

ಅತ್ತೆ ಮಾವ ಸುತ್ತ ಬಳಗವು ಬಂದು। ಹತ್ತಿರ ಇದ್ದ ಗೆಳತಿಯರು ಬಂದು॥
ಸತ್ತಾತನು ಹೇಗೆ ಬದುಕಿದನೆಂದು। ಆಶ್ಚರ್ಯಪಟ್ಟು ಕೇಳಿದರು ॥ ಜೋ ॥ 26 ॥

ತಂದೆ ತಾಯಿ ಬಂಧು ಬಳಗವು ಬಂದು। ರಂಭೆ ಗೆಳತಿಯರೆಲ್ಲ ಬಂದು॥ ಇಂದು
ಸತ್ತಾತನು ಹ್ಯಾಂಗೆ ಬದುಕಿದನೆಂದು। ಸಂಭ್ರಮಾಶ್ಚರ್ಯದಿ ಕೇಳಿದರು॥
ಜೋ..... ॥ 27 ॥

ಏನು ನೋಂವಿಯ ನೂತಿ ಏನು ಬಾಗಿಣ ಕೊಟ್ಟೆ। ಮಾವಯ್ಯ ಸೊಸೆಯನು ಕೇಳಿದನು ॥ ಆಷಾಢಮಾಸದಲಿ ಅಮಾವಾಸ್ಯೆ ದಿನದಲಿ। ದಿವಶಿ ಗೌರಿಯ ಜೊತೆ ನಾನು॥ ಜ್ಯೋ.... ॥ 28 ॥

ಕಂದ ಸೊಸೆಯನು ಅಂದಣವನೇರಿಸಿ। ಬಂದರು ಬಹಳ ಸಂಭ್ರಮದಲಿ॥ ತಂದೆತಾಯಿಗಳು ಹಿಂದಿನ ವಾರ್ತೆಯ ಕೇಳಿ। ಆನಂದದಿ ನಂದಗೆ ಹರಿಸಿದರು॥ ಜ್ಯೋ..... ॥ 29 ॥

ಅಷ್ಟು ಜನರ ಸಹಿತ ಪಟ್ಟಣವನ್ನು ಪೊಕ್ಕು। ಶ್ರೇಷ್ಠ ಸಿಂಹಾಸನವನೇರಿದನು॥ ಪಟ್ಟಗಟ್ಟಲು ರಾಜ ಅಷ್ಟು ಜನರಿಗೆ ಉಡುಗೊರೆ। ಕೊಟ್ಟು ಸಂತೋಷದಿ ಆರುತಿಯ ಬೆಳಗಿದರು ॥ ಜ್ಯೋ..... ॥ 30 ॥

ಅಣ್ಣ ಅತ್ತಿಗೆಯರು ಖಿನ್ನ ಮನದಿ ಪೋಗೆ। ಮನ್ನಿಸೆ ಅವರಿಗಾವರಿಸುತಲಿ॥ ಎನ್ನ ದೈವಕೆ ನೀವಿನ್ನೇನು ಮಾಡುವಿರಿ । ಅನ್ನುತ ಅವರ ತೋಷಿಸುತ್ತಿದ್ದಳು॥ ಜ್ಯೋ..... ॥ 31 ॥

ಪತಿವ್ರತಾ ಸ್ತ್ರೀಯರಿಗತಿ ಕ್ರೋಧವಿಲ್ಲೆಂದು। ಪೃಥ್ವಿಯೊಳಗಿನ ಜನರು ಪೊಗಳಿದರು॥ ಸತಿಪತಿಯರು ಕೂಡಿ ಹಿತದಿ ರಾಜ್ಯವನಾಳಿ। ಕ್ಷಿತಿಸುರರರರ್ಚಿಸಿ ಗತಿ ಪಡೆದರು ॥ ಜ್ಯೋ..... ॥ 32 ॥

ಅಡವಿ ಅರಣ್ಯಕ್ಕಾಗಿ ಕಡೆಯಿಲ್ಲವೆ ರಥವಾಗಿ। ಮೃಡಪಾರ್ವತಿ ಬಂದು ವರಕೊಟ್ಟಳು॥ ದೃಢ ಮನದಲಿ ಪಾರ್ವತಿಯ ನೂತ ನೋಂವಿಯ। ಪೊಡವಿಯೊಳಗೆಲ್ಲ ಆಗಲಿ ನೋಂವಿ॥ ಜ್ಯೋ...... ॥ 33 ॥

॥ ಮಂಗಲಂ ॥